ಕೋಲಾರ	1) ಬಾಗೇಪಲ್ಲಿ 2) ನಂಗ್ಲಿ 3) ಗೌರಿಬಿದನೂರು 4) ರಾಯಲ್ ಪಾಡ್
ಮೈಸೂರು	ಗುಂಡ್ಲುಪೇಟೆ
ಚಾಮರಾಜನಗರ	ಚಿಕ್ಕಹೊಳೆ ಡ್ಯಾಮ್
ಮಂಗಳೂರು	ತಲಪಾಡಿ
ಬೀದರ್	ಹುಮ್ನಾಬಾದ್
ಗುಲ್ಬರ್ಗಾ	ಆಳಂದ್
ಬಳ್ಳಾರಿ	ಹಗರಿ
ಬೆಳಗಾವಿ	1) ನಿಪ್ಪಾಣಿ 2) ರಾಮನಗರ
ಬಿಜಾಪುರ	ಝಳಕಿ
ಚಿಕ್ಕೋಡಿ	ಕಾಗವಾಡ

ಆ) ರೂ 4735 00 ಲಕ್ಷಗಳು

ಇ) ಫಬ್ರುವರಿ 2007 ರವರೆಗೆ ರೂ 4168 62 ಲಕ್ಷಗಳು

1543 (2064) ಶ್ರೀ ರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸ್ತುತ ವರ್ಷ ವಕ್ಫ್ ಇಲಾಖೆ ವತಿಯಿಂದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿನ ಮಸೀದಿಗಳ ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೆ,

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಬಾಗೇಪಲ್ಲಿ ಕ್ಷೇತ್ರದಿಂದ ಅನುದಾನದ ಬಿಡುಗಡೆಗಾಗಿ ಯಾವ ಪ್ರಸ್ತಾವನೆಯು ಬಂದಿರುವುದಿಲ್ಲ ಪ್ರಸ್ತಾವನೆಗಳು ಬಂದಿದ್ದಲ್ಲಿ, ಹಣದ ಲಭ್ಯತೆ ಆಧಾರದ ಮೇಲೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

1544 (2065) ಶ್ರೀ ಶ್ರೀರಾಮರೆಡ್ಡಿ (ಬಾಗೇಪಲ್ಲಿ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಅನುಮತಿ ಪಡೆದ ಗಣಿಗಾರಿಕೆಗಳ ಸಂಖ್ಯೆ ಎಷ್ಟು,

ಆ) ಜಿಲ್ಲೆಯಲ್ಲಿ ಹೊಸ ಗಣಿಗಾರಿಕೆಗಳಿಗೆ ಅನುಮತಿ ನೀಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ,

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಯವರು)

ಅ) ಕೋಲಾರ ಜಿಲ್ಲೆಯಲ್ಲಿ ಅನುಮತಿ ಪಡೆದ ಗಣಿಗಾರಿಕೆಗಳ ತಾಲ್ಲೂಕಾವಾರು ವಿವರಗಳನ್ನು ಕೆಳಗಿನಂತೆ ನೀಡಿದೆ